# ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಪನಹಳ್ಳಿ

ಸಿ ಸಿ ನಂಬರ 343 /2021

| ಸಿಡಬ್ಲ್ಯೂ | 1 | ಪಿಡಬ್ಲ್ಯೂ | 2 |
|---|---|---|---|

ಸಾಕ್ಷಿದಾರರ ಹೆಸರು : ಕರಿಗೌಡ

ತಂದೆಯ ಹೆಸರು : ಹನುಮನಗೌಡ

ವಯಸ್ಸು : 56 ವರ್ಷ ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು 15.03.2025

ಉದ್ಯೋಗ : ವ್ಯವಸಾಯ

ವಾಸ ಸ್ಥಳ : ರಾಗಿಮಸಲವಾಡ

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:-**

ನನಗೆ ಆರೋಪಿತರ ಪರಿಚಯ ಇರುತ್ತದೆ. ನಮ್ಮ ಊರಿನಲ್ಲಿ ಇರುವ ಆಂಜನೇಯ ದೇವಸ್ಥಾನ ಮುಜರಾಯಿ ಇಲಾಖೆಗೆ ಸೇರಿರುತ್ತದೆ. ನಮ್ಮ ಗ್ರಾಮದ ಪೂಜಾರಿ ಸಿದ್ದಪ್ಪ ಎನ್ನುವವರು ಅದರ ಅರ್ಚಕ ಆಗಿರುತ್ತಾರೆ. ಸಾರ್ವಜನಿಕ ರಿಂದ ಹಣವನ್ನು ವಸೂಲಿ ಮಾಡುತ್ತಿದ್ದಾರೆಂದು ತಿಳಿದು ಬಂದಿರುತ್ತದೆ. ಅದಕ್ಕೆ ಸಂಬಂಧಿಸಿದಂತೆ ನಾನು ಮತ್ತು ನಮ್ಮ ಗ್ರಾಮದವರು ದಿನಾಂಕ 07.10.2020 ರಂದು ಬಳ್ಳಾರಿ ಜಿಲ್ಲಾಧಿಕಾರಿಯವರಿಗೆ ನಾನು ದೂರನ್ನು ನೀಡಿರುತ್ತೇನೆ. ದಿನಾಂಕ 24.11.2020 ರಂದು ಉಪ ತಹಶೀಲ್ದಾರರು ಮತ್ತು ಗ್ರಾಮ ಲೆಕ್ಕಾಧಿಕಾರಿಗಳು ವಿಚಾರಣೆಗಾಗಿ ನಮ್ಮ ಗ್ರಾಮಕ್ಕೆ ಬಂದಿರುತ್ತಾರೆ. ಆಗ ಶಂಭುಲಿಂಗಪ್ಪ ಮತ್ತು ಚಿಕ್ಕನಗೌಡ, ಕೊಟ್ರೇಶ್, ಶಿವಪುತ್ರ, ಗಣೇಶ್, ನಾಗರಾಜ, ವೀರೇಶ್, ಜಗದೀಶ್ ಗುಂಪು ಕಟ್ಟಿಕೊಂಡು ಗಲಾಟೆ ಮಾಡಿರುತ್ತಾರೆ. ಅರ್ಚಕರ ವಿರುದ್ಧ ದೂರು ಕೊಟ್ಟಿರುತ್ತೀರಾ ಅಂತಾ ಅವಾಚ್ಯಶಬ್ದಗಳಿಂದ ನಾಗರಾಜ, ಶಶಿ ಕುಮಾರ, ನನಗೆ ಮತ್ತು ರಾಮನಗೌಡರಿಗೆ ಹೊಡೆದಿರುತ್ತಾರೆ. ಕೈಗೆ ಕೋಲಿನಿಂದ ಹೊಡೆದಿರುತ್ತಾರೆ. ನಾನು ತೆಲಗಿ ಆಸ್ಪತ್ರೆಗೆ ಹೋಗಿರುತ್ತೇನೆ. ಅಲ್ಲಿಂದ ಜಿಲ್ಲಾ ಆಸ್ಪತ್ರೆಗೆ ಹೋಗಿರುತ್ತೇನೆ. ಚಿನ್ನಪ್ಪರ ಮಂಜಪ್ಪ, ಸೊಕ್ಕೆರ ಮಂಜಪ್ಪ, ಸಿರಗೇರಹಳ್ಳಿ ಚಂದ್ರಪ್ಪ ಜಗಳವನ್ನು ಬಿಡಿಸಿರುತ್ತಾರೆ. ಆಸ್ಪತ್ರೆಯಿಂದ ವಾಪಾಸ್ಸು ಬಂದ ನಂತರ ಉರಿನ ಹಿರಿಯರಿಗೆ

ಸಿ ಸಿ ನಂಬರ 343 /2021

| ಸಿಡಬ್ಲ್ಯೂ | 1 | ಪಿಡಬ್ಲ್ಯೂ | 2 |
|---|---|---|---|

ವಿಷಯವನ್ನು ತಿಳಿಸಿರುತ್ತೇವೆ. ನಾನು ನಮ್ಮ ಮನೆಯ ಬಳಿ ಇರುವಾಗ ದಿನಾಂಕ 25.11.2020 ರಂದು ನಾನು ಮತ್ತು ನಾಗರಾಜ, ಶಶಿ, ಕೊಟ್ರೇಶ್ ಇದ್ದಾಗ ಆಗ ಬೀರಪ್ಪ, ದಾಸಪ್ಪರ ನಾಗರಾಜ, ಚನ್ನಪ್ಪ, ಶಂಭುಲಿಂಗಪ್ಪ ಎಲ್ಲರೂ ಗುಂಪು ಕಟ್ಟಿಕೊಂಡು ಬಂದು ನನಗೆ ನಾಗರಾಜನಿಗೆ ಕಣಗ ದಿಂದ ಹೊಡೆದಿರುತ್ತಾರೆ. ನಂತರ ಹಲವಾಗಲು ಪೋಲೀಸ ಠಾಣೆಗೆ ಹೋಗಿ ದೂರು ಕೊಟ್ಟಿರುತ್ತೇನೆ. ದೂರು ಕೊಟ್ಟ ನಂತರ ಮಧ್ಯಾಹ್ನ 2.30 ಗಂಟೆಗೆ ಪೋಲೀಸರು ಸ್ಥಳಕ್ಕೆ ಬಂದರು. ಆಗ ಸ್ಥಳದಲ್ಲಿ ನಾನು, ನಾಗರಾಜ, ಶಶಿ, ಕೊಟ್ರೇಶ್, ದಡಾರದಪ್ಪ ಹಾಜರಿದ್ದೆವು. 2.30 ರಿಂದ 4 ಗಂಟೆಯವರೆಗೆ ಸ್ಥಳದಲ್ಲಿ ಮಹಜರ ಮಾಡಿರುತ್ತಾರೆ. ನಕಾಶೆಯನ್ನು ತಯಾರಿಸಿರುತ್ತಾರೆ. ಗ್ರಾಮ ಪಂಚಾಯತಿ ಹತ್ತಿರ ಒಂದು ಮಹಜರ ಮಾಡಿರುತ್ತಾರೆ. ಗ್ರಾಮ ಲೆಕ್ಕಿಗರ ಕಚೇರಿಯ ಹತ್ತಿರ, ನಮ್ಮ ಮನೆಯ ಹತ್ತಿರ ಮಹಜರ ಮಾಡಿರುತ್ತಾರೆ. ನಾನು ಸಹಿ ಮಾಡಿರುತ್ತೇನೆ. ಸ್ಥಳದಲ್ಲಿ ಪೋಟೋ ಕೂಡ ತೆಗೆದಿರುತ್ತಾರೆ. ದೂರನ್ನು ನಿ ಪಿ 1 ಎಂದು, ಸಾಕ್ಷಿ ಸಹಿಯನ್ನು ನಿ ಪಿ 1(ಎ) ಎಂದು ಗುರುತಿಸಲಾಯಿತು. ಪಂಚನಾಮೆಯನ್ನು 2 ಕಚ್ಚಾ ನಕಾಶೆಯನ್ನು ನಿ ಪಿ 2 ರಿಂದ 4 ಎಂದು, ಸಾಕ್ಷಿ ಸಹಿಯನ್ನು ನಿ ಪಿ 2(ಎ), 3(ಎ), 4(ಎ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಕಣಗ ಈಗಾಗಲೇ ಮು ಮಾ 1 ಎಂದು ಗುರುತಿಸಲಾಗಿದೆ. ಅದನ್ನು ಗುರುತಿಸುತ್ತೇನೆ. ಪೋಲೀಸರಿಗೆ ನಾನು ಹೇಳಿಕೆಯನ್ನು ಕೊಟ್ಟಿರುತ್ತೇನೆ.

**(ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು ಅನುಮತಿಸಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಹರಪನಹಳ್ಳಿ.